ಪಾರಿಜಾತ, ನಂದಬಟ್ಟಲಿನ ಹೂವು, ಪಟಿಕದ ಹೂವು. ತೋಟದ ಒಂದು ಮೂಲೆಯಲ್ಲಿ ಹಚ್ಚ ಹಸುರಿನಿಂದ ತೊನೆದಾಡುತ್ತಿದ್ದ ಬಾಳೆಗಿಡಗಳು, ಹೀಗೆ ವಿವಿಧ ಬಣ್ಣ ಹಾಗೂ ವಿವಿಧ ಆಕಾರಗಳಿಂದ ಕೂಡಿದ್ದ ಭಿನ್ನತೆಗಳ ಹಲವು ಹೂಗಳ ತೋಟ ಅದು. ಇಂತಹ ವೈವಿಧ್ಯದ ತೋಟವನ್ನು ನೋಡಿಯೇ 'ಯಾವ ದೇಶದ ಹೂವಿದ್ದಾವ ಇವು!' ಎಂದು ಹೆಸರು ಕಾಣಿಸದ ತತ್ತ್ವಪದಕಾರನೊಬ್ಬ ಹಾಡಿದ್ದಾನೆ. ದೇವರ ಕರುಣೆಯಿಂದ ನಮಗೆ ದೊರೆತಿದ್ದ ಈ ಸೌಂದರ್ಯದ ತೋಟವು ಭೂಮಿಗೆ ದೊರೆತ ಮೌಲಿಕವಾದ ಉಡುಗೊರೆ ಎಂದು ಭಾವಿಸಿದ್ದೇನೆ.

ಹೂವಿನ ತೋಟದ ಇಂತಹುದೇ ಒಂದು ರೂಪಕ ಕವಿ ಶಾತ್ತನಾರ್ ಬರೆದ ತಮಿಳಿನ 'ಮಣಿಮೇಖಲೆ' ಕಾವ್ಯದಲ್ಲಿ ಬರುತ್ತದೆ.

ಮಣಿಮೇಖಲೆ ಮತ್ತು ಸುಧಾಮತಿ ಸಂಜೆಯ ಪೂಜೆಗಾಗಿ ಹೂ ತರಲು ಹೊರಡುತ್ತಾರೆ. ಹೊರಡುವ ಮುನ್ನ ಸುಧಾಮತಿಯು, 'ತಂಗಿ ಮಣಿಮೇಕಲೆ, ಹೂ ಕೊಯ್ಯಲು ಯಾವ ಹೂತೋಟಕ್ಕೆ ಹೋಗೋಣ? ಇಳುವಂತಿಗೆ ತೋಟಕ್ಕೆ ಹೋಗೋಣವೆಂದರೆ ಅದು ರಾಜಭವನದ ಬಳಿಯಿದೆ. ನಮ್ಮಂತಹ ಯುವತಿಯರು ಅಲ್ಲಿಗೆ ಹೋಗುವುದು ಸರಿಯಲ್ಲ'. 'ಉಯ್ಯಾಲೆ ವನವು ಈ ಉತ್ಸವದ ದಿನಗಳಲ್ಲಿ ದೇವತೆಗಳಿಗೆ ಮೀಸಲು; ಅದನ್ನು ಭೂತಗಳು ಕಾಯುತ್ತವೆ. ಅಲ್ಲಿಗೆ ಮನುಷ್ಯರ ಪ್ರವೇಶವಿಲ್ಲ. ಇನ್ನು ಉಳಿದುದು ಒಂದೇ ಒಂದು ತೋಟ; ಅದು ಕರುಣಾಮಯನಾದ ಬುದ್ಧಭಗವಂತನಿಗೆ ಸೇರಿದ ವನ. ಅಲ್ಲಿ ನಮಗೆ ಬೇಕಾದ ಎಲ್ಲಾ ಬಗೆಯ ಹೂಗಳೂ ದೊರಕುತ್ತದೆ. ಬುದ್ಧಭಗವಂತನ ಪಾದಪದ್ಮಗಳನ್ನು ಸಂದರ್ಶಿಸಿದ ಪುಣ್ಯವೂ ಬರುವುದು. ವ್ಯಥೆಗೊಂಡ ಮನಸ್ಸಿಗೆ ಶಾಂತಿಯೂ ದೊರಕುವುದು' ಎಂದಳು. ಲೌಕಿಕವಾಗಿ ಮತ್ತು ಆಧ್ಯಾತ್ಮಿಕವಾಗಿಯೂ ಬಹುತ್ವದ ಸೌಂದರ್ಯವನ್ನು ತಿಳಿಯಹೇಳುವ ಈ ರೂಪಕವು 'ಮಣಿಮೇಖಲೆ' ಕಾವ್ಯವನ್ನು ಮತ್ತು ನಮ್ಮ ಸಮಾಜವನ್ನು ಶೃಂಗರಿಸಿದೆ.

ಹೂವಿನ ತೋಟದ ತಡಿಕೆಬಾಗಿಲಲ್ಲೇ ನಿಂತಿರುತ್ತಿದ್ದ ನಾನು, ತಡಿಕೆ ಕಂಡಿಯಿಂದಲೇ ಕಣ್ಣಗಲಿಸಿಕೊಂಡು ಹೂವಿನ ಗಿಡಗಳನ್ನು ನೋಡುತ್ತಿದ್ದೆ. ತೋಟದ ಪೂರ್ವಭಾಗದಲ್ಲಿ ಉದಯಿಸುತ್ತಿದ್ದ ಸೂರ್ಯನ ಪರಿಶುದ್ಧ ಎಳೆಯ ಕಿರಣಗಳು ಹೂ ಗಿಡಗಳ ಎಲೆಗಳ ನಡುವಿನಿಂದ ಹಾದು ತೋಟಕ್ಕೆ ಉಜ್ವಲವಾದ ಬೆಳಕಿನ ರಂಗೋಲಿಯನ್ನು ಬಿಟ್ಟಂತೆ ಕಾಣುತ್ತಿತ್ತು. ಆ ಬೆಳಕಿನ ಅಲೆಗಳಿಗೆ ಮೈತೆತ್ತ ಹೂಗಳು ಫಳ

